**ಹಸುಕರುಗಳ ಮೇಲೆ ಪ್ರೀತಿ :** ಶ್ರೀಕೃಷ್ಣನಂತೆ ಶ್ರೀರಾಮಕೃಷ್ಣರು ಕೂಡ ಹಸುಕರುಗಳನ್ನು ತುಂಬಾ ಪ್ರೀತಿಸುತ್ತಿದ್ದರು. ಬಾಲ್ಯದಲ್ಲೇ ತಮ್ಮ ಪುಟ್ಟಕೈಗಳಿಂದ ಅವರು ಹಸುಕರುಗಳಿಗೆ ಆಹಾರವನ್ನು ತಿನ್ನಿಸುತ್ತಿದ್ದರು. ಮಾವಿನತೋಪಿನಲ್ಲಿ ತಮ್ಮ ಸ್ನೇಹಿತರೊಂದಿಗೆ ಅವುಗಳೊಡನೆ ಆಟವಾಡುತ್ತಿದ್ದರು. ಅವರ ಕೈಗಳನ್ನು ನೆಕ್ಕುತ್ತಿದ್ದ ಆ ಹಸುಕರುಗಳು ಅವೆಷ್ಟು ಧನ್ಯ!

**ಮೀನಿಗೆ ಅಭಯದಾನ :** ಶ್ರೀರಾಮಕೃಷ್ಣರ ಜೀವನದಲ್ಲಿ ಮೀನಿಗೆ ಸಂಬಂಧಿಸಿದ ಒಂದು ಘಟನೆ ಇದೆ. ಅದು ತಮ್ಮಲ್ಲಿ ಶರಣಾಗತರಾದವರಿಗೆ ಶ್ರೀರಾಮಕೃಷ್ಣರು ಹೇಗೆ ಅನುಗ್ರಹಿಸುತ್ತಿದ್ದರು ಎನ್ನುವುದನ್ನು ಎತ್ತಿ ತೋರಿಸುತ್ತದೆ. ಒಂದು ದಿನ ಶ್ರೀರಾಮಕೃಷ್ಣರು ಸಿಹೋರ್ ಎಂಬ ಗ್ರಾಮದಲ್ಲಿ ತಮ್ಮ ಸ್ನೇಹಿತ ರಾಜಾರಾಮ್ ಎಂಬುವವನ ಜೊತೆಯಲ್ಲಿ, ಹತ್ತಿರದ ಕೊಳದ ಬಳಿ ಅಡ್ಡಾಡಲು ಹೋಗಿದ್ದರು. ಅಲ್ಲಿ ಬೇಕಾದಷ್ಟು ಮೀನುಗಳು ನೀರಿನಲ್ಲಿ ಓಡಾಡುವುದನ್ನು ಅವರು ಕಂಡರು. ಅವುಗಳಲ್ಲಿ ಕೆಲವು ಕೈಗೆ ಸಿಲುಕುವಷ್ಟು ಹತ್ತಿರವೇ ಓಡಾಡುತ್ತಿದ್ದವು. ಶ್ರೀರಾಮಕೃಷ್ಣರು ರಾಜಾರಾಮ್‌ಗೆ, "ಬೇಕಾದರೆ ಕೆಲವನ್ನು ಹಿಡಿದುಕೊ" ಎಂದರು. ರಾಜಾರಾಮ್ ಸಂತೋಷದಿಂದ ಬಗ್ಗಿ ನಿಂತುಕೊಂಡು ಮೀನು ಹಿಡಿಯಲು ಯತ್ನಿಸುತ್ತಿದ್ದ. ಆಗ ದೊಡ್ಡ ಮೀನೊಂದು ನೀರಿನಿಂದ ಹಾರಿ, ಶ್ರೀರಾಮಕೃಷ್ಣರ ಪಾದದ ಬಳಿ ಬಿದ್ದು, ಅವರ ಕೃಪೆಯನ್ನು ಯಾಚಿಸುತ್ತಿದೆಯೇನೋ ಎನ್ನುವ ರೀತಿಯಲ್ಲಿ, ವಿಲವಿಲನೆ ಒದ್ದಾಡಲಾರಂಭಿಸಿತು. ಶ್ರೀರಾಮಕೃಷ್ಣರು ಅದರ ಶರಣಾಗತಿಯನ್ನು ಕಂಡು ಸಂತೋಷಪಟ್ಟು, ಅದನ್ನು ತಮ್ಮ ಕೈಯಲ್ಲಿ ತೆಗೆದುಕೊಂಡು, ಮೃದುವಾಗಿ ಅದರ ಮೈ ಸವರಿ, "ಹೋಗು, ನಿನಗೇನೂ ಅಪಾಯವಿಲ್ಲ" ಎಂದು ಅದನ್ನು ಮತ್ತೆ ನೀರಿಗೆ ಬಿಟ್ಟರು. ಆ ಮೀನಿಗೆ ದಿವ್ಯ ರಕ್ಷಣೆಯನ್ನು ನೀಡಿ, ಅಭಯಪ್ರದಾನ ಮಾಡಿ, ಪ್ರಾಣದಾನ ಮಾಡಿದರು. ಆ ಮೀನು ಮಾತ್ರವಲ್ಲ, ಅದರೊಡನೆ ಇದ್ದ ಉಳಿದ ಎಲ್ಲಾ ಮೀನುಗಳೂ ನೀರಿನ ತಳಕ್ಕೆ ಹೊರಟುಹೋದವು.

**ಪಕ್ಷಿಗಳೊಡನೆ ಒಡನಾಟ:** ಶ್ರೀರಾಮಕೃಷ್ಣರಿಗೆ ಬಾಲ್ಯದಿಂದಲೇ ಅನೇಕ ಯೋಗಶಕ್ತಿಗಳು ಸಿದ್ಧಿಸಿದ್ದವು. ಆದರೆ ಅವುಗಳನ್ನು ಅವರು ಬಹಳ ವಿರಳವಾಗಿ ಉಪಯೋಗಿಸುತ್ತಿದ್ದರು. ಅವರಿಗೆ ಪಕ್ಷಿಗಳ ಭಾಷೆಯನ್ನು ಅರ್ಥಮಾಡಿಕೊಳ್ಳುವ ಕಲೆ ಸಿದ್ಧಿಸಿತ್ತು. ಒಮ್ಮೆ ಅವರು ಮರದ ಮೇಲೆ ಕುಳಿತಿದ್ದ ಎರಡು ಕಾಗೆಗಳ ಸಂಭಾಷಣೆಯನ್ನು, ತಮ್ಮ ಹಳ್ಳಿಯ ಜನಗಳಿಗೆಲ್ಲಾ ತಿಳಿಸಿ, ಅವರನ್ನು ಆಶ್ಚರ್ಯಗೊಳಿಸಿದರು. ಆ ಕಾಗೆಗಳು ಮರದ ಮೇಲೆ ಕುಳಿತು, ಹವಾಮಾನದ ಬಗ್ಗೆಯೂ, ಮುಂದೆ ಬರುವ ಮಳೆಯ ಬಗ್ಗೆಯೂ ಮಾತನಾಡುತ್ತಿವೆ ಎಂದು ಹೇಳಿದರು. ಅವರ ಸಾಧನೆಯ ಸಮಯದಲ್ಲಿ ದಿನಗಟ್ಟಲೆ ನಿಶ್ಚಲವಾಗಿ, ವಿಗ್ರಹದಂತೆ ಹೇಗೆ ಕುಳಿತಿರುತ್ತಿದ್ದರೆಂದರೆ, ಅವರು ಒಂದು ನಿರ್ಜೀವ ವಸ್ತು ಎಂದುಕೊಂಡು, ಕೆಲವು ಪುಟ್ಟ ಹಕ್ಕಿಗಳು ಅವರ ತಲೆಕೂದಲಿನಲ್ಲಿ ಗೂಡು ಕಟ್ಟಿಬಿಟ್ಟಿದ್ದವು.

ಶ್ರೀರಾಮಕೃಷ್ಣರ ಬಾಲ್ಯಜೀವನದ ಇನ್ನೊಂದು ಅಚ್ಚರಿಯ ಸಂಗತಿಯೂ ನಮಗೆಲ್ಲಾ ಚಿರಪರಿಚಿತವಾದದ್ದೇ. ಒಮ್ಮೆ ಗದ್ದೆಯ ಮಧ್ಯೆ ನಡೆದುಹೋಗುತ್ತಿದ್ದಾಗ, ಆಕಾಶದಲ್ಲಿ ಕಪ್ಪನೆಯ ಮೋಡದ ಹಿನ್ನೆಲೆಯಲ್ಲಿ, ಬಿಳಿ ಕೊಕ್ಕರೆಗಳ ಸಾಲು ಹಾರಿ ಹೋಗುತ್ತಿದ್ದುದನ್ನು ಕಂಡರು. ಅದನ್ನು ಕಂಡೇ, ಆ ಪ್ರಕೃತಿಯ ಸೌಂದರ್ಯದಲ್ಲಿ ತಮ್ಮನ್ನು ತಾವೇ ಮರೆತು, ಭಾವಸಮಾಧಿಯನ್ನು ಹೊಂದಿದರು.

**ಸರ್ಕಸ್ಸಿನ ಸಿಂಹ :** ಶ್ರೀರಾಮಕೃಷ್ಣರು ಸಹಜ ಸ್ಥಿತಿಯಲ್ಲಿರುವಾಗ ಬಹಳ ರಸಿಕರಾಗಿದ್ದರು. ಅವರಿಗೆ ಪ್ರಪಂಚದ ಎಲ್ಲಾ ವಿಷಯಗಳಲ್ಲಿಯೂ ಅತಿ ಕುತೂಹಲ ಇತ್ತು. ಒಮ್ಮೆ ಕಲ್ಕತ್ತೆಗೆ ಸರ್ಕಸ್ ಬಂದಿದೆಯೆಂದು ಕೇಳಿ, ತಾವೂ ಅದಕ್ಕೆ ಹೋಗಬೇಕೆಂದು ಆಸೆಯನ್ನು ವ್ಯಕ್ತಪಡಿಸಿದರು. ಸರಿ, ಭಕ್ತರು ಅವರನ್ನು ಕರೆದುಕೊಂಡು ಹೋದರು. ಅಲ್ಲಿ ಅವರನ್ನು ಆಕರ್ಷಿಸಿದುದು ಬೋನಿನಲ್ಲಿದ್ದ ಸಿಂಹ. ಅದನ್ನು ನೋಡಿದಾಗ ಅವರ ಮನಸ್ಸಿಗೆ ಹೊಳೆದುದು, " ಆಹಾ, ಈ ಸಿಂಹದ ಮೇಲಲ್ಲವೇ ಜಗನ್ಮಾತೆ ದುರ್ಗೆ ಕುಳಿತುಕೊಳ್ಳುವುದು" ಎಂದು. ಹಾಗೆ ಅಂದುಕೊಂಡದ್ದೇ ಸರಿ, "ತಾಯಿ! ಸಿಂಹವಾಹಿನಿ" ಎಂದು ಮಾತೆಯನ್ನು ನೆನೆಯುತ್ತಾ ಸಮಾಧಿಸ್ಥಿತಿಗೆ ಹೋದರು.

ಮತ್ತೊಂದು ದಿನ ಶ್ರೀರಾಮಕೃಷ್ಣರು ದೇವಸ್ಥಾನದಲ್ಲಿ ಎಂದಿನಂತೆ ಕಾಳೀಪೂಜೆಯಲ್ಲಿ ನಿರತರಾಗಿದ್ದರು. ಅವರಿಗೆ ಜಗನ್ಮಾತೆ ಬರಿಯ ವಿಗ್ರಹವಾಗಿರಲಿಲ್ಲ. ಅವಳೊಡನೆ ಅವರು ಮಾತುಕತೆಯಾಡುತ್ತಿದ್ದರು. ಆ ಸಮಯಕ್ಕೆ ಅಲ್ಲಿಗೆ ಒಂದು ಬೆಕ್ಕು ಬಂದಿತು. "ಓಹೋ, ಮೊದಲು ಆ ಬೆಕ್ಕಿಗೆ ನೈವೇದ್ಯವನ್ನು ತಿನ್ನಿಸಲು ಹೇಳುತ್ತಿರುವೆಯಾ?" ಎಂದು ಜಗನ್ಮಾತೆಯ ಮುಂದೆ ಇಟ್ಟಿದ್ದ ನೈವೇದ್ಯವನ್ನು ತೆಗೆದು, ಆ ಬೆಕ್ಕಿಗೆ ಪ್ರೀತಿಯಿಂದ ತಿನ್ನಿಸಿದರು. ಚೈತನ್ಯಮಯಿ ಜಗನ್ಮಾತೆ ಆ ಬೆಕ್ಕಿನ ಹೃದಯದಲ್ಲೂ ಇರುವುದನ್ನು ಕಂಡರು.

ತಮ್ಮ ಕೊನೆಯ ದಿನಗಳಲ್ಲಿ ಕಾಶೀಪುರದ ತೋಟದಮನೆಯಲ್ಲಿದ್ದಾಗ, ಒಂದು ಬೆಕ್ಕು ಅದರ ಮರಿಗಳೊಡನೆ ಬಂದು ಅವರ ಕೊಠಡಿಯಲ್ಲೇ ಸುತ್ತಾಡುತ್ತಿತ್ತು. ನವಗೋಪಾಲ್ ಘೋಷ್ ಎಂಬ ಭಕ್ತನ ಪತ್ನಿಯನ್ನು, "ಈ ಬೆಕ್ಕು ಮತ್ತು ಮರಿಗಳನ್ನು ಮನೆಗೆ ಕೊಂಡೊಯ್ದು ಪ್ರೀತಿಯಿಂದ ಸಾಕುವೆಯಾ?" ಎಂದು ಕೇಳಿದರು. ಆ ಮಹಾಮಾತೆಯಾದರೋ, ಸಂತೋಷದಿಂದ ಒಪ್ಪಿಕೊಂಡು, ಅವುಗಳೆಲ್ಲವನ್ನೂ ಮನೆಗೆ ಕೊಂಡೊಯ್ದು, ತುಂಬು ಪ್ರೀತಿಯಿಂದ ಸಾಕಿದಳು. ಅವು ಶ್ರೀರಾಮಕೃಷ್ಣರು ತನಗೆ ಕೊಟ್ಟ ಉಡುಗೊರೆ ಎಂದು ಆಕೆ ಭಾವಿಸಿದ್ದಳು.

ಈ ಪಶುಪಕ್ಷಿಗಳಿಗೆಲ್ಲಾ ಮಾತನಾಡುವುದೇನಾದರೂ ಬಂದಿದ್ದರೆ, ಅವುಗಳೆಲ್ಲಾ ತಮಗಾದ ಅನುಭವಗಳನ್ನು ಮಾನವ ಭಾಷೆಯಲ್ಲಿ ವ್ಯಕ್ತಪಡಿಸಿ, ಶ್ರೀರಾಮಕೃಷ್ಣರ ಬಗ್ಗೆ ನಮಗೆ ಗೊತ್ತಿಲ್ಲದ ಇನ್ನೆಷ್ಟು ಸ್ವಾರಸ್ಯಕರ ಘಟನೆಗಳನ್ನು ತಿಳಿಸುತ್ತಿದ್ದವೋ, ಏನೋ!

# ಛಾಯಾಚಿತ್ರಗಳಲ್ಲಿ ವಿವೇಕಾನಂದರು

**ಕೆ.ಆರ್. ಮೋಹನ್**

**ಸ್ವಾಮಿ ವಿವೇಕಾನಂದರರದು ಧೀಮಂತ ವ್ಯಕ್ತಿತ್ವ. ಅವರ ತೇಜಸ್ಸು, ಓಜಸ್ಸು, ಗಾಂಭೀರ್ಯ – ಇವುಗಳನ್ನು ಅವರ ಛಾಯಾಚಿತ್ರಗಳು ಸ್ವಲ್ಪವಾದರೂ ನಮಗೆ ಪರಿಚಯ ಮಾಡಿಕೊಡುತ್ತವೆ. ಪ್ರತಿಯೊಂದು ಛಾಯಾಚಿತ್ರಕ್ಕೂ ತನ್ನದೇ ಆದ ಮಹತ್ವ ಮತ್ತು ಐತಿಹ್ಯ ಇರುವುದು ಕಂಡುಬರುತ್ತದೆ. ಈ ಸ್ವಾರಸ್ಯಕರ ಹಾಗೂ ಚೇತೋಹಾರಿಯಾದ ವಿಷಯದ ಬಗ್ಗೆ 'ವಿವೇಕಪ್ರಭ' ವು ಒಂದು ಲೇಖನಮಾಲೆಯನ್ನು ಈ ತಿಂಗಳ ಸಂಚಿಕೆಯಿಂದ ಆರಂಭಿಸುತ್ತಿದೆ. ಸ್ವಾಮಿ ವಿವೇಕಾನಂದರ ೧೫೦ನೇ ಜಯಂತಿ ಮಹೋತ್ಸವದ ಸಂದರ್ಭದಲ್ಲಿ ಪ್ರಕಟವಾಗುತ್ತಿರುವ ಈ ಲೇಖನ ಸರಣಿಯ ಲೇಖಕರಾದ ಶ್ರೀ ಮೋಹನ್ ಅವರು ಮೈಸೂರು ಶ್ರೀರಾಮಕೃಷ್ಣ ಆಶ್ರಮದ ನಿಕಟ ಭಕ್ತರು. ಇವರ ಹಲವು ಲೇಖನಗಳು 'ಕಸ್ತೂರಿ' ಮಾಸಪತ್ರಿಕೆಯಲ್ಲಿ ಪ್ರಕಟವಾಗಿವೆ.**

**ಛಾ**ಯಾಚಿತ್ರವೆಂದರೆ ಸೂಕ್ಷ್ಮಗ್ರಾಹಿ ಪಟಲದ ಮೇಲೆ ಬೆಳಕಿನ ರಾಸಾಯನಿಕ ಕ್ರಿಯೆಯಿಂದ ತೆಗೆದ ಚಿತ್ರ. ಹಾಗೆ ನೋಡಿದರೆ ಛಾಯಾಚಿತ್ರ ಒಂದು ಜಡವಸ್ತು. ಆದರೆ ಛಾಯಾಗ್ರಾಹಕನ ಕೌಶಲದಿಂದ ಮತ್ತು ಛಾಯಾಚಿತ್ರಣದಲ್ಲಿನ ವ್ಯಕ್ತಿಯ ಸುಂದರ ಅಂಗಸೌಷ್ಠವದಿಂದ ಛಾಯಾಚಿತ್ರಕ್ಕೆ ಒಂದು ಜೀವಕಳೆ ಬರಬಹುದು. ಛಾಯಾಚಿತ್ರದ ಆವಿಷ್ಕಾರ ೧೯ನೇ ಶತಮಾನದ ಆದಿಯಲ್ಲಿ ಆಯಿತು. ಅವತಾರಪುರುಷರೆಂದು ಪ್ರಸಿದ್ಧರಾದವರಲ್ಲಿ ಶ್ರೀರಾಮಕೃಷ್ಣ ಪರಮಹಂಸರ ಛಾಯಾಚಿತ್ರವೇ ನಮಗೆ ಮೊಟ್ಟಮೊದಲು ಲಭ್ಯವಾಗಿರುವುದು. ಅವರು ವಿವಿಧ ಭಂಗಿಯಲ್ಲಿರುವ ಸುಮಾರು ಆರು ಛಾಯಾಚಿತ್ರಗಳು ಲಭ್ಯವಿವೆ. ಮೊದಲನೇ ಛಾಯಾಚಿತ್ರ ಅವರು ಭಾವಸಮಾಧಿಯಲ್ಲಿ ದಕ್ಷಿಣೇಶ್ವರದಲ್ಲಿದ್ದಾಗ ತೆಗೆದದ್ದು. ಆ ಛಾಯಾಚಿತ್ರ ಇಂದು ಅಸಂಖ್ಯಾತ ಭಕ್ತರ ಪೂಜಾಗೃಹಗಳಲ್ಲಿ ವಿರಾಜಮಾನವಾಗಿದೆ. ಆನಂತರ ಒಮ್ಮೆ ಅವರಿಗೆ ಸರಿಯಾಗಿ ಉಡುಪನ್ನು ತೊಡಿಸಿ ಸ್ಟುಡಿಯೋಗೆ ಕರೆತಂದರು. ಆಗ ಅಲ್ಲಿ ಪರಮಹಂಸರು ಬಹಳ ಕುತೂಹಲದಿಂದ ಛಾಯಾಚಿತ್ರಣ ವಿಧಾನವನ್ನು ತಿಳಿದುಕೊಂಡರು. ಮುಂದೆ ಅದನ್ನೇ ತಮ್ಮ ಮಾತುಗಳಲ್ಲಿ ದೃಷ್ಟಾಂತರೂಪಕವಾಗಿ ಬಳಸಿಕೊಂಡರು.

"ನರೇಂದ್ರ ಒಂದು ನಿಜವಾದ ರತ್ನ" ಎಂದು ಶ್ರೀರಾಮಕೃಷ್ಣರು ಮೆಚ್ಚುಗೆಯಿಂದ ಒಂದು ಬಾರಿ ಹೇಳಿದ್ದರು. ಅಂತಹ ಸ್ವಾಮಿ ವಿವೇಕಾನಂದರು ಕೇವಲ ೩೯ ವರ್ಷ ಮಾತ್ರ ಬದುಕಿದ್ದರು. ಪುಣ್ಯವಶಾತ್ ಅವರ ಹತ್ತಾರು ಛಾಯಾಚಿತ್ರಗಳು ಇಂದು ಲಭ್ಯವಿವೆ. ದೇಶವಿದೇಶಗಳಲ್ಲಿ, ಬಗೆಬಗೆಯ ಭಂಗಿಗಳಲ್ಲಿ ಅಂದರೆ ವಿದ್ಯಾರ್ಥಿಯಾಗಿ, ಯುವಸಂನ್ಯಾಸಿಯಾಗಿ, ಪರಿವ್ರಾಜಕರಾಗಿ, ಗುರುಭಾಯಿಗಳ ಜತೆಗಾರರಾಗಿ, ವಿಶ್ವಸಮ್ಮೇಳನದಲ್ಲಿ ಪ್ರತಿನಿಧಿಯಾಗಿ, ವಿದೇಶಿ ಶಿಷ್ಯರೊಂದಿಗೆ ಧ್ಯಾನಸ್ಥರಾಗಿ ಇರುವ ಈ ವೀರಸಂನ್ಯಾಸಿಯ ಛಾಯಾಚಿತ್ರಗಳನ್ನು ಸೆರೆಹಿಡಿಯಲಾಗಿದೆ. ಅವರ ಮುಖ, ಅಂಗಸೌಷ್ಠವ – ಇವು ಛಾಯಾಚಿತ್ರಕ್ಕೆಂದೇ ಹೇಳಿ ಮಾಡಿಸಿದಂತಿವೆ (Photogenic). ಹಾಗಾಗಿ ಸ್ವಾಮೀಜಿ ಎಲ್ಲಾ ಛಾಯಾಚಿತ್ರಗಳಲ್ಲಿ ಚೆನ್ನಾಗಿ ಮೂಡಿಬಂದಿದ್ದಾರೆ. ಎಂತಹ ವ್ಯಕ್ತಿಯೇ ಆಗಿರಲಿ, ಸ್ವಾಮೀಜಿಯವರ ಛಾಯಾಚಿತ್ರದ ಮುಂದೆ ಹಾದು ಹೋಗುವಾಗ ಅವರ ಆಕರ್ಷಣೆಗೆ ಒಳಗಾಗದೆ ಇರುವುದಿಲ್ಲ. ಆತ ತನಗೆ ಅರಿವಿಲ್ಲದೆ ಗೌರವದಿಂದ ತಲೆಬಾಗುತ್ತಾನೆ, ಇಲ್ಲವೆ ಕಣ್ಣುಮುಚ್ಚಿ ಸ್ವಾಮೀಜಿಯನ್ನು ನೆನೆಯುತ್ತಾನೆ.

೧೯೬೬ ರಲ್ಲಿ 'ವಿವೇಕಾನಂದ – ಎ ಬಯಾಗ್ರಫಿ ಇನ್ ಪಿಕ್ಚರ್ಸ್ (Vivekananda–A Biography in pictures)' ಎಂಬ ೧೧೮ ಪುಟಗಳ ಸುಂದರ ಚಿತ್ರಸಂಪುಟವನ್ನು (Album) ಮಾಯಾವತಿಯ ಅದ್ವೈತ ಆಶ್ರಮವು ಹೊರತಂದಿತು. ೧೯೯೫ ರಲ್ಲಿ "ವಿವೇಕಾನಂದ: ಈಸ್ಟ್ ಮೀಟ್ಸ್ ವೆಸ್ಟ್– ಎ ಪಿಕ್ಟೋರಿಯಲ್ ಬಯಾಗ್ರಫಿ" (Vivekananda : East meets West - A Pictorial Biography) ಎಂಬ ೧೬೪ ಪುಟಗಳ ಮತ್ತೊಂದು ಸುಂದರ ಚಿತ್ರಸಂಪುಟವನ್ನು ಅಮೇರಿಕದಲ್ಲಿನ "ವೇದಾಂತ ಸೊಸೈಟಿ ಆಫ್ ಸೇಂಟ್ ಲೂಯಿಸ್' ವತಿಯಿಂದ ಸ್ವಾಮಿ ಚೇತನಾನಂದಜಿ ಅವರು ಪ್ರಕಟಿಸಿದರು.

ಮೇಲಿನ ಎರಡು ಚಿತ್ರಸಂಪುಟಗಳಿಗೆ ಮೆರಗು ಕೊಡುವ ಹಾಗೆ ಅಮೆರಿಕದಲ್ಲಿರುವ ವೇದಾಂತ ಸೊಸೈಟಿ ಆಫ್ ನಾರ್ದರ್ನ್ ಕ್ಯಾಲಿಫೋರ್ನಿಯಾದ ಸದಸ್ಯರು ಪ್ರವ್ರಾಜಿಕಾ ವಿರಜಾಪ್ರಾಣಾ ಅವರ ನಿರ್ವಹಣೆಯಲ್ಲಿ, ೧೯೯೩ ರಲ್ಲಿ "ಫೋಟೊಗ್ರಾಫ್ಸ್ ಆಫ್ ಸ್ವಾಮಿ ವಿವೇಕಾನಂದ (Photographs of Swami Vivekananda)" ಎಂಬ ೨೮೬ ಪುಟಗಳ ಬೃಹತ್ ಚಿತ್ರಸಂಪುಟವನ್ನು ಪ್ರಕಟಿಸಿದರು. ೧೮೮೬–೧೯೦೧ರ ಅವಧಿಯಲ್ಲಿ ಲಭ್ಯವಿದ್ದ ಸ್ವಾಮೀಜಿಯವರ ೧೦೬ ಛಾಯಾಚಿತ್ರಗಳನ್ನು ಸಂಗ್ರಹಿಸಿ, ಕಾಲಾನುಕ್ರಮವಾಗಿ ವಿಂಗಡಿಸಿ ಪ್ರತಿ ಛಾಯಾಚಿತ್ರದ ಹಿನ್ನೆಲೆ ಮತ್ತು ಅದರ ವೈಶಿಷ್ಟ್ಯಗಳನ್ನು ವಿವರಿಸಿ, ಅಚ್ಚುಕಟ್ಟಾಗಿ ಉತ್ತಮ ಹೊಳಪಿನ ಬಿಳಿ ಆರ್ಟ್ ಕಾಗದದಲ್ಲಿ (Art Paper) ಪ್ರಕಟಿಸಿದರು. ಈ ಚಿತ್ರಸಂಪುಟವನ್ನು ವೇದಾಂತ ಸೊಸೈಟಿಯವರು, '೧೮೯೩ ರಲ್ಲಿ ಚಿಕಾಗೊದಲ್ಲಿ ನಡೆದ ವಿಶ್ವಧರ್ಮ ಸಮ್ಮೇಳನದಲ್ಲಿ ಭಾಗವಹಿಸಿದ್ದರ ಗೌರವಾರ್ಥವಾಗಿ', ಸ್ವಾಮೀಜಿಯವರಿಗೆ ೧೯೯೩ ರಲ್ಲಿ ತಮ್ಮ ಸಂಸ್ಥೆಯ ಶತಮಾನೋತ್ಸವ ಸಂದರ್ಭದಲ್ಲಿ ಸಮರ್ಪಣೆ ಮಾಡಿದರು.

೧೦೬ ಛಾಯಾಚಿತ್ರಗಳ ಸಂಕ್ಷಿಪ್ತ ವರ್ಗೀಕರಣ ಈ ರೀತಿ ಇದೆ: {೧} ಮೊದಲನೇ ಮತ್ತು ಎರಡನೇ ಚಿತ್ರಗಳು ೧೮೮೫ ರಲ್ಲಿ ನರೇಂದ್ರನಾಗಿದ್ದಾಗ ಅಂದರೆ ಪರಮಹಂಸರು ಇನ್ನೂ ಜೀವಂತವಿದ್ದಾಗ ತೆಗೆದಂಥವು. {೨} ೩ ೪ ೫ ಸಂಖ್ಯೆಗಳ ಚಿತ್ರಗಳು

ಪರಮಹಂಸರ ಮಹಾನಿರ್ವಾಣದ ಸಮಯದಲ್ಲಿ ತೆಗೆದಂಥವು (ಸಮೂಹಚಿತ್ರಗಳು). {೩} ೬ ನೇ ಚಿತ್ರ ಬಾರಾನಗರ ಮಠದ ಗುರುಭಾಯಿಗಳೊಡನೆ ತೆಗೆದಿದ್ದು. {೪} ಚಿತ್ರ ೭ ರಿಂದ ೧೨ರ ತನಕ ಸ್ವಾಮೀಜಿ ಪರಿವ್ರಾಜಕರಾಗಿದ್ದಾಗ. {೫} ಚಿತ್ರ ೧೩ ರಿಂದ ೫೩ರ ತನಕ ಸ್ವಾಮೀಜಿಯವರ ಅಮೆರಿಕ ವಾಸ್ತವ್ಯದಲ್ಲಿ. {೬} ಚಿತ್ರ ೫೪ ರಿಂದ ೫೭ ಶ್ರೀಲಂಕಾ ದೇಶದಲ್ಲಿ. {೭} ಚಿತ್ರ ೫೮ ರಿಂದ ೭೯ ರ ತನಕ ವಿದೇಶದಿಂದ ಹಿಂದಿರುಗಿದ ಮೇಲೆ ಭಾರತದಲ್ಲಿ. {೮} ಚಿತ್ರ ೮೦ ರಿಂದ ೧೦೧ರ ತನಕ ಅಮೇರಿಕದ ಎರಡನೇ ಭೇಟಿಯಲ್ಲಿ. {೯} ಚಿತ್ರ ೧೦೨ ರಿಂದ ೧೦೬ ತನಕ ೧೯೦೨ ರಲ್ಲಿ ಸ್ವಾಮೀಜಿಯವರ ಕೊನೆಯ ದಿನಗಳಲ್ಲಿ ತೆಗೆದಂಥವು. ೧೦೫ ನೇ ಚಿತ್ರವನ್ನು ನೋಡಿದಾಗ ಬಹಳ ಸಂಕಟವಾಗುತ್ತದೆ. ಸ್ವಾಮೀಜಿ ಅದರಲ್ಲಿ ತುಂಬಾ ಅಸ್ವಸ್ಥರಾಗಿರುವಂತೆ ಕಂಡುಬರುತ್ತಾರೆ.

ಭಾರತದಲ್ಲಿ ಸ್ವಾಮೀಜಿಯವರ ಭಕ್ತರ ಮತ್ತು ಅಭಿಮಾನಿಗಳ ಉಪಯೋಗಕ್ಕಾಗಿ, ಮೇಲಿನ ೧೦೬ ಛಾಯಾಚಿತ್ರಗಳನ್ನು ಚೆನ್ನೈನ 'ವೇದಾಂತ ಕೇಸರಿ' ಎಂಬ ಇಂಗ್ಲಿಷ್ ಮಾಸಪತ್ರಿಕೆಯು, ಅಕ್ಟೋಬರ್ ೧೯೯೫ ರಿಂದ ನವೆಂಬರ್ ೧೯೯೬ ರವರೆಗಿನ ತನ್ನ ಸಂಚಿಕೆಗಳಲ್ಲಿ ಅನುಕ್ರಮವಾಗಿ, ಅವುಗಳ ವಿವರದೊಂದಿಗೆ ಪ್ರಕಟಿಸಿತು. ೨೦೦೨ ರಲ್ಲಿ ಭಕ್ತಾದಿಗಳಿಗೆ ಸುಲಭವಾಗಿ ದೊರೆಯುವಂತೆ ಕಡಿಮೆ ಬೆಲೆಯಲ್ಲಿ ಚೆನ್ನೈನ ಶ್ರೀರಾಮಕೃಷ್ಣ ಮಠದವರು ಈ ಚಿತ್ರಸಂಪುಟವನ್ನು ಪ್ರಕಟಿಸಿದರು.

'ವಿವೇಕಪ್ರಭ' ಪತ್ರಿಕೆಯು ಸ್ವಾಮೀಜಿಯವರ ೧೫೦ನೇ ಜಯಂತಿ ಸಂದರ್ಭದಲ್ಲಿ ತನ್ನ ಓದುಗರಿಗೆ ಸ್ವಾಮೀಜಿಯವರ ಬಹುತೇಕ ಛಾಯಾಚಿತ್ರಗಳನ್ನು ಪರಿಚಯಿಸುವ ಯೋಜನೆಯನ್ನು ಹಮ್ಮಿಕೊಂಡಿದೆ. ಪ್ರತಿ ಸಂಚಿಕೆಯಲ್ಲಿ ಸ್ವಾಮೀಜಿಯವರ ಎರಡು ಅಥವಾ ಮೂರು ಚಿತ್ರಗಳನ್ನು ಪ್ರಕಟಿಸಿ, ಅವುಗಳ ಹಿನ್ನೆಲೆ ಹಾಗೂ ವೈಶಿಷ್ಟ್ಯಗಳ ಕಿರುಪರಿಚಯವನ್ನು ಮಾಡಿಕೊಡಲಾಗುವುದು.

ಸ್ವಾಮೀಜಿಯವರ ಅಪಾರ ಶಿಷ್ಯವರ್ಗದಲ್ಲಿ ಶರಚ್ಚಂದ್ರ ದೇವವರ್ಮ (ಇಂದು) ಎಂಬ ಗೃಹೀಭಕ್ತರಿದ್ದರು. ಅವರಿಗೆ ಸಂಸ್ಕೃತದಲ್ಲಿ ಒಳ್ಳೆಯ ಪಾಂಡಿತ್ಯ ಮತ್ತು ಕವಿತಾಶಕ್ತಿಯಿತ್ತು. ಅವರು **ಮೂರ್ತಮಹೇಶ್ವರಮ್ ಉಜ್ವಲಭಾಸ್ಕರಮ್** ಎಂದು ಪ್ರಾರಂಭವಾಗುವ, ವಿವೇಕಾನಂದರನ್ನು ಕುರಿತ ಸ್ತೋತ್ರವನ್ನು ಅವರು ರಚಿಸಿದರು. ಇದು ಬಹಳ ಜನಪ್ರಿಯವಾಗಿದೆ. ಆ ಸ್ತೋತ್ರದ ಭಾವಾರ್ಥ ಹೀಗಿದೆ: "ಮಹೇಶ್ವರನೇ ಅವತರಿಸಿದಂತಿರುವ, ಸೂರ್ಯನಂತೆ ಪ್ರಜ್ವಲಿಸುತ್ತಿರುವ, ಸುರನರರಿಂದ ವಂದ್ಯರಾದ, ವೇದಗಳೇ ದೇಹವನ್ನು ಧರಿಸಿ ಬಂದಂತಿರುವ, ಹೇಯವಾದ ಕಾಮಿನೀ ಕಾಂಚನಗಳ ಬಂಧನವನ್ನು ಪೂರ್ಣವಾಗಿ ಜಯಿಸಿದ, ಕೋಟಿಸೂರ್ಯಕಿರಣಗಳ ಕಾಂತಿಯಿಂದ ಪ್ರಜ್ವಲಿಸುವ, ಕೌಪೀನಧಾರಿ ಪುರುಷಸಿಂಹನಾದ, **'ಹೆದರದಿರಿ–ಹೆದರದಿರಿ!'** ಎಂಬ ಭವ್ಯಗರ್ಜನೆಯಿಂದ ಪ್ರಚಂಡ ತಾಂಡವವನ್ನಾಡುತ್ತಿರುವ, ಕೇವಲ ಕಡೆಗಣ್ಣಿನ ನೋಟ ಮಾತ್ರದಿಂದಲೇ ಭುಕ್ತಿಮುಕ್ತಿಗಳನ್ನು ಕರುಣಿಸುವ ಮತ್ತು ಪಾಪರಾಶಿಯನ್ನು ನಾಶಮಾಡಬಲ್ಲ, ಬಾಲಚಂದ್ರನನ್ನು ಧರಿಸಿರುವ ಸಾಕ್ಷಾತ್ ಶಿವನೇ ಆದ ಮತ್ತು 'ಇಂದು–ವಂದ್ಯ' ನಾದ ಗುರು ಶ್ರೀವಿವೇಕಾನಂದರಿಗೆ ನಮಸ್ಕರಿಸುತ್ತೇನೆ." ಈ ಸ್ತೋತ್ರದ ಹಿನ್ನೆಲೆಯಲ್ಲಿ ಛಾಯಾಚಿತ್ರಗಳನ್ನು ವೀಕ್ಷಿಸಿದರೆ ಸ್ವಾಮೀಜಿಯವರ ಬಗ್ಗೆ ನಮಗೆ ಇರುವ ಪ್ರೀತಿ ಮತ್ತು ಗೌರವಗಳು ಇನ್ನೂ ಹೆಚ್ಚಾಗುವುದು ಖಂಡಿತ.



**ಚಿತ್ರ ೧ :** ಇದು ಶ್ರೀರಾಮಕೃಷ್ಣ ಪರಮಹಂಸರ ನಿರ್ಯಾಣದ ಮುಂಚೆ ಅಂದರೆ ಏಪ್ರಿಲ್ ೧೮೮೬ ರಲ್ಲಿ ತೆಗೆದ ಚಿತ್ರ. ನರೇಂದ್ರನ ಆಗಿನ ಚರ್ಯೆಯ ಬಗ್ಗೆ ಶ್ರೀರಾಮಕೃಷ್ಣರೇ ಚೆನ್ನಾಗಿ ವಿವರಿಸಿದ್ದಾರೆ. ಒಂದು ಸಂದರ್ಭದಲ್ಲಿ ತಮ್ಮ ಸುತ್ತಲೂ ಕುಳಿತಿದ್ದ ಶಿಷ್ಯರಿಗೆ ನರೇಂದ್ರನನ್ನು ತೋರಿಸುತ್ತಾ ಶ್ರೀರಾಮಕೃಷ್ಣರು ಹೀಗೆ ಉದ್ಗರಿಸುತ್ತಾರೆ: "ನೋಡಿ ಅವನನ್ನು! ಅವನ ಗ್ರಹಣಶಕ್ತಿ ಅದೆಷ್ಟು ಅದ್ಭುತವಾಗಿದೆ! ಅವನಲ್ಲಿ ಪ್ರಖರ ಜ್ಞಾನವೆಂಬುದು ಪಾರವಿಲ್ಲದ ಸಾಗರದಂತಿದೆ. ಸಾಕ್ಷಾತ್ ಮಹಾಮಾಯೆ ಕೂಡ ಅವನ ಹತ್ತಿರ ಸುಳಿಯಲಾರಳು. ಆಕೆ ಅವನಿಗಿಂತ ಹತ್ತು ಅಡಿ ದೂರದಲ್ಲೇ ನಿಲ್ಲಬೇಕು! ಅವನಿಗೆ ಈ ಆಧ್ಯಾತ್ಮಿಕ ಹಾಗೂ ಬೌದ್ಧಿಕ ವೈಭವವನ್ನು ಕರುಣಿಸಿದವಳು ಅವಳೇ. ಆದರೆ ಆ ವೈಭವದ ಹಾಗೂ ಪ್ರಖರ ತೇಜಸ್ಸಿನ ಮುಂದೆ ಅವಳೇ ನಿಲ್ಲಲಾರದವಳಾಗಿದ್ದಾಳೆ."